**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 20/2011**

| | | |
|---|---|---|
| ಹೆಸರು | ಮೋಹನ್ ರೆಡ್ಡಿ | ಪಿ.ಡಬ್ಲ್ಯೂ–1 |
| ತಂದೆ ಹೆಸರು | ನಂಜುಂಡ ರೆಡ್ಡಿ | |
| ವಯಸ್ಸು | 31 ವರ್ಷ | |
| ಕೆಲಸ | ಪಿ.ಎಸ್.ಐ. | ಸಾ.ಪ್ರ.ವ.ಬೋ |
| ವಾಸ | ಹೊಸಕೋಟೆ | ದಿ:30.03.2021 |

**ಆರೋಪಿಯ ಅನುಪಸ್ಥಿತಿಯಲ್ಲಿ ದಂಡಪ್ರಕ್ರಿಯಾ ಸಂಹಿತೆಯ ಕಲಂ 299ರಡಿ ಸಾಕ್ಷ್ಯದ ಅಭಿಲೇಖ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ : –**

ನಾನು ಹೊಸಕೋಟೆ ಅಬಕಾರಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 04.09.2020 ರಂದು ಸಿ.ಸಿ.20/2011ರಲ್ಲಿ 1ನೇ ಆರೋಪಿಯ ಬಗ್ಗೆ ದಿನ್ನಹಳ್ಳಿ/ಕೊಂಡ್ರಹಳ್ಳಿ ಮಧ್ಯದಲ್ಲಿರುವ ಗುಡಿಸಲು ಮನೆಗೆ ಹೋಗಿ ವಿಚಾರಿಸಿದೆ. ಅಲ್ಲಿ ಆರೋಪಿ ವಾಸವಿಲ್ಲ ಎಂದು ತಿಳಿದಿರುತ್ತದೆ. ಪಿಳ್ಳಪ್ಪ ಮತ್ತು ನಾರಾಯಣಪ್ಪರವರನ್ನು ಪಂಚರನನ್ನಾಗಿ ಬರಮಾಡಿಕೊಂಡು 3.30 ರಿಂದ 4.30 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ.

ನಂತರ ಪಂಚರ ಸಮಕ್ಷಮ ಉದ್ಘೋಷಣಾ ಪ್ರತಿಯನ್ನು ಸದರಿ ವಿಳಾಸದ ಮನೆಯ ಗೋಡೆಯ ಮೇಲೆ, ಸರ್ಕಾರಿ ಶಾಲೆಯ ಮೇಲೆ ಸಾರ್ವಜನಕರಿಗೆ ಎದುರಿಗೆ ಕಾಣುವ ಹಾಗೆ ಪ್ರತಿಗಳನ್ನು ಅಂಟಿಸಲಾಯಿತು. ಆ ನಂತರ ಆರೋಪಿ ವಿರುದ್ದ ಹೊರಡಿಸಿದ್ದ ಉದ್ಘೋಷಣೆಯನ್ನು ಸದರಿ ವಿಳಾಸದಲ್ಲಿ ಕೂಗಿ ಪ್ರಚಾರ ಮಾಡಿ ಆರೋಪಿ ಸುಳಿವು ಸಿಕ್ಕಲ್ಲಿ ಹೊಸಕೋಟೆಯ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆಯಾಗಲಿ, ಹೊಸಕೋಟೆ ಅಬಕಾರಿ ಪೊಲೀಸ್ ಠಾಣೆಗಾಗಲೀ ತಕ್ಷಣ ತಿಳಿಸುವಂತೆ ತಳವಾರನಿಂದ ಗ್ರಾಮದಲ್ಲಿ ಟಾಂಟಾಂನಲ್ಲಿ ಸಾರಿ ಹೇಳಿದು, ಆ ನಂತರ ಪಂಚರ ಸಮಕ್ಷಮ ಪ್ರೋಕ್ಲಮೇಷನ್ ಮಹಜರನ್ನು ಬರೆದು, ಪಂಚರ ಸಹಿ ಮತ್ತು ನನ್ನ ಸಹಿಯನ್ನು ಪಡೆಯಲಾಯಿತು.

ಸಾಕ್ಷಿಯು ಉದ್ಗೋಷಣಾ ಪ್ರತಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ನಿ.ಪಿ.1 ಎಂದು, ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮಹಜರನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.2(ಎ) ಎಂದು, ನಿವೇದನೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**